









**ರಾಂಧಾ ಜಲಪಾತ:** ವಿಲ್ಸನ್ ಅಣೆಕಟ್ಟಿನಿಂದ ಸುಮಾರು 11 ಕಿ.ಮೀ. ದೂರದಲ್ಲಿ ಆರ್ಥರ್ ಹಿಲ್ ಸರೋವರದ ಸನಿಹದಲ್ಲೇ ಜಲಪಾತ ಭೋರ್ಗರೆಯುತ್ತದೆ. ಭಂಡಾರ್ದಾರದಲ್ಲಿ ಬ್ರಿಟಿಷರ ಕಾಲದಲ್ಲೇ ಸ್ಥಾಪಿಸಲ್ಪಟ್ಟಿರುವ ಜಲವಿದ್ಯುತ್ ಸ್ಥಾವರಕ್ಕೆ ಈ ಜಲಪಾತವೇ ಮೂಲ ಕಾರಣ. ದೇಶದಲ್ಲೇ ತೃತೀಯ ಅತಿ ದೊಡ್ಡ ಜಲಪಾತವಿದು. ಪ್ರವರ ನದಿಯ ನೀರು ಸುಮಾರು 170 ಅಡಿಗಳಷ್ಟು ಎತ್ತರದಿಂದ ಬೆಟ್ಟಗುಡ್ಡಗಳ ಇಳಿಜಾರಿಲ್ಲಿ ಇಳಿದು ನದಿ, ಜಲಪಾತ ನಿರ್ಮಾಣಗೊಂಡಿದೆ.

**ಅಂಬ್ರೆಲ್ಲಾ ಜಲಪಾತ:** ಮಳೆಗಾಲದಲ್ಲಿ ಅರ್ಥರ್ ಸರೋವರದ ಜಲಮಟ್ಟ ಏರಿದಾಗ ವಿಲ್ಸನ್ ಅಣೆಕಟ್ಟಿನ ಗೇಟುಗಳಿಂದ ಕೆಳಹರಿದು ಬರುವ ನೀರಿನಿಂದ ಉಂಟಾಗುವ ಈ ಜಲಪಾತ ನೋಡಲು ಸೊಗಸಾಗಿದೆ. ಕೊಡೆಯ ಆಕಾರದ ಬಂಡೆಗಳ ಮೇಲಿಂದ ನೀರು ಹರಿಯುವದರಿಂದ ಇದಕ್ಕೆ ಅಂಬ್ರೆಲ್ಲಾ ಜಲಪಾತ ಎಂಬ ಹೆಸರಿದೆ.

ಇದಿಷ್ಟೇ ಅಲ್ಲದೆ, ವಿಲ್ಸನ್ ಅಣೆಕಟ್ಟು ಮತ್ತು ರಾಂಧಾ ಜಲಪಾತಗಳ ನಡುವಿನ ರಸ್ತೆಯಲ್ಲಿ ಕಾಣಬಹುದಾದ ಗದ್ದೆ ಪ್ರದೇಶಗಳ ಉದ್ದಕ್ಕೂ ಪಶ್ಚಿಮ ಘಟ್ಟಗಳ ಸಹ್ಯಾದ್ರಿ ಪರ್ವತ ಶ್ರೇಣಿಯ ಇಳಿಜಾರುಗಳಲ್ಲಿ ಮಳೆ ಬೀಳುತ್ತಲೇ ಅಣಬೆಗಳಂತೆ ಹುಟ್ಟಿಕೊಂಡ ಇನ್ನಿತರ ಸುಮಾರು 60ಕ್ಕಿಂತಲೂ ಹೆಚ್ಚು ಸಣ್ಣಪುಟ್ಟ ಝುರಿಗಳಿವೆ. ಹಲವೆಡೆ ಹಾಲಿನಂತಹ ಬಿಳಿ ನೊರೆಯುಕ್ಕಿಸುತ್ತಾ ಇನ್ನು ಕೆಲವೆಡೆ ಕೆಸರು ಸಹಿತ ಹಿನ್ನೀರು ಸಿಡಿಸುತ್ತಾ ಧರೆಗೆ ಚಿಮ್ಮಿ ಗದ್ದೆಗಳಲ್ಲಿ ಹರಿವ ಈ ನೀರ ತೊರೆಯ ದೃಶ್ಯಗಳು ನಯನಮನೋಹರ. ಪರ್ವತ ಶಿಖರಗಳಿಂದ ಧುಮ್ಮಿಕ್ಕುವ ಈ ಮಿನಿ ಜಲಪಾತಗಳ ಝುರಿ ನೀರಿನ ಕೆಳಗೆ ತುಂತುರು ಹನಿಗಳೊಂದಿಗೆ ಚೆಲ್ಲಾಟವಾಡುತ್ತಾ ಸ್ನಾನ ಮಾಡುವ ಅನುಭವ ಅದ್ವಿತೀಯ. ಖುಷಿಯ ಭರದಲ್ಲಿ ಅಲ್ಲಿನ ಜಾರುವ ಬಂಡೆಗಳನ್ನು ಮಾತ್ರ ಕಡೆಗಣಿಸಬಾರದು ಅಷ್ಟೇ.